7.	ರಾಮಚಂದ್ರಯ್ಯ ಬಿನ್ ಹನುಮಂತಯ್ಯ, ಗೌರೀಪುರ	ಚೇಳೂರು	ಚೇಳೂರು	20	10
8.	ವೆಂಕಟಗಿರಯ್ಯ ಬಿನ್ ಹನುಮಂತಯ್ಯ, ಗೌರೀಪುರ	"	"	20	10
9.	ಸಿದ್ದಯ್ಯ ಬಿನ್ ತಿಮ್ಮಯ್ಯ ಮುನಿಯಪ್ಪನ ಪಾಳ್ಯ	"	"	20	10
10.	ತಿಮ್ಮಯ್ಯ ಬಿನ್ ದಾಸಪ್ಪ ಮುನಿಯಪ್ಪನ ಪಾಳ್ಯ	ಚೇಳೂರು	ಚೇಳೂರು	20	10
11.	ಚಿಕ್ಕಮಾದಮ್ಮ ಕೋಂ ಮೈಲಾರಯ್ಯ ಶೆಟ್ಟಿಹಳ್ಳಿ	ಹೊಸಕೆರೆ	ಹಾಗಲ್ಬಡಿ	20	10

ರಾಜ್ಯದಲ್ಲಿ ಹರಿಜನರಿಗೆ ಅಂಬೇಡ್ಕರ್ ಮನೆಗಳ ನಿರ್ಮಾಣ

1105 (1128): ಶ್ರೀ ಎ. ರುಕ್ಮಯ್ಯ ಪೂಜಾರಿ (ಪಿಟ್ಲ):–

ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992-93ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಹರಿಜನರಿಗೆ ಅಂಬೇಡ್ಕರ್ ಮನೆಗಳು ಮಂಜೂರಾಗಿದೆಯೇ;

ಆ) ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 100 ಮನೆಗಳು ಮಂಜೂರಾಗಿರುವುದು ನಿಜವೆ;

ಇ) ಫಲಾನುಭವಿಗಳ ಆಯ್ಕೆ ಆಗಿದೆಯೇ ? ಅಂಬೇಡ್ಕರ್ ಮನೆಗಳ ಕೆಲಸ ಪ್ರಾರಂಭಿಸುವುದು ಯಾವಾಗ ?

ಶ್ರೀ ಗೋಪಿನಾಥ ಆರ್. ಸಾಂತ್ರ (ವಸತಿ ಸಚಿವರು):–

ಅ) ಸರ್ಕಾರಿ ಆದೇಶ ಸಂ. ಹೆಚ್‌ಯುಡಿ 138 ಪಿಹೆಚ್‌ಎಸ್ 9 ದಿನಾಂಕ 28:12:91 ಮತ್ತು ಹೆಚ್‌ಯುಡಿ 239ಕೆಹೆಚ್‌ಬಿ 91 ದಿನಾಂಕ 31:1:92ರ ಪ್ರಕಾರ ಕ್ರಮವಾಗಿ ಗ್ರಾಮೀಣ ಪ್ರದೇಶಗಳಲ್ಲಿ 19,880 ಮನೆಗಳನ್ನು ಹಾಗೂ ನಗರ ಪ್ರದೇಶಗಳಲ್ಲಿ 10,000 ಮನೆಗಳನ್ನು ಈ ಯೋಜನೆಯಡಿ ಮಂಜೂರು ಮಾಡಿದೆ.

ಆ) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಗ್ರಾಮೀಣ ಪ್ರದೇಶದಲ್ಲಿ 97ರಿಂದ 98ಮನೆಗಳನ್ನು ಮಂಜೂರು ಮಾಡಿದೆ ಮತ್ತು ನಗರ ಪ್ರದೇಶದಲ್ಲಿ ಸದರಿ ಪ್ರದೇಶದ ಜನಸಂಖ್ಯೆ ಆಧರಿಸಿ ಮನೆಗಳನ್ನು ಮಂಜೂರು ಮಾಡಲಾಗಿದೆ.

ಇ) ಕೆಲವು ಕ್ಷೇತ್ರಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದರೂ ಸಹ ಕರ್ನಾಟಕ ಗೃಹ ಮಂಡಳಿ ಯಾವುದೇ ಮನೆ ಈ ಯೋಜನೆಯಡಿ ನಿರ್ಮಿಸಿಲ್ಲ. ಆದ್ದರಿಂದ ಸರ್ಕಾರಿ ಆದೇಶಸಂಖ್ಯೆ ಹೆಚ್‌ಯುಡಿ 138 ಪಿಹೆಚ್‌ಎಸ್ 91 ದಿನಾಂಕ 13:2:92 ಹಾಗೂ ಹೆಚ್‌ಯುಡಿ 239 ಕೆಹೆಚ್‌ಬಿ 91 ದಿನಾಂಕ 18:2:93ರ ಪ್ರಕಾರ ತಕ್ಷಣದಿಂದ ಜಾರಿಗೆ ಬರುವಂತೆ ಮನೆಗಳ ನಿರ್ಮಾಣ ಕಾರ್ಯವನ್ನು ಕರ್ನಾಟಕ ಗೃಹ ಮಂಡಳಿಯಿಂದ ಹಿಂದಕ್ಕೆ ಪಡೆದು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ವಹಿಸಿದ್ದು ಫಲಾನುಭವಿಗಳ ಆಯ್ಕೆ ಕೆಲಸ ನಡೆದಿದೆ. ನಂತರ ಮನೆಗಳ ನಿರ್ಮಾಣ ಕಾರ್ಯ ಜಿಲ್ಲಾಧಿಕಾರಿಗಳ ಮುಖಾಂತರ ನಡೆಯಲಿದೆ.